ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 12-21
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕೊಡಗು ಜಿಲ್ಲೆಯ ಎರವ ಬುಡಕಟ್ಟು ಸಮುದಾಯದ ಶೈಕ್ಷಣಿಕ ಸ್ಥಿತಿಗತಿಗಳ ವಿಶ್ಲೇಷಣೆ

**ಸುಜಾತ ಆರ್[1] ಮತ್ತು ಡಾ. ಆರ್.ಎಚ್. ನಾಯಕ[2]**

[1]ಸಂಶೋಧನಾ ವಿದ್ಯಾರ್ಥಿನಿ, ಶಿಕ್ಷಣ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

[2]ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ

***Abstract:***

*ಪ್ರಸ್ತುತ ಅಧ್ಯಯನ ಉದ್ದೇಶವು ಕೊಡಗು ಜಿಲ್ಲೆಯ ಎರವ ಬುಡಕಟ್ಟು ಸಮುದಾಯದ ಶೈಕ್ಷಣಿಕ ಸ್ಥಿತಿಗತಿಗಳ ವಿಶ್ಲೇಷಣೆ ಮಾಡುವುದಾಗಿದೆ. ಅಧ್ಯಯನಕ್ಕೆ ವಿವರಣಾತ್ಮಕ ಸಮೀಕ್ಷಾ ವಿಧಾನ ಮತ್ತು ಸರಳ ಯಾದೃಚ್ಛಿಕ ಮಾದರಿ ವಿಧಾನದ ಬಳಸಲಾಗಿದ್ದು. ಪ್ರಾಥಮಿಕ ಮೂಲಗಳು ಹಾಗೂ ಅನುಷಂಗಿಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯ ಆಧಾರದಲ್ಲಿ ಎರವ ಬುಡಕಟ್ಟು ಸಮುದಾಯದ ಶೈಕ್ಷಣಿಕ ಸ್ಥಿತಿಗತಿಗಳನ್ನು ಚರ್ಚಿಸಲಾಗಿದೆ.*

***Keywords:*** *ಎರವ ಬುಡಕಟ್ಟು, ಸಮುದಾಯ, ಶಿಕ್ಷಣ, ಶೈಕ್ಷಣಿಕ ಸೌಲಭ್ಯಗಳು ಮತ್ತು ಸ್ಥಿತಿಗತಿಗಳು*

## ಪೀಠಿಕೆ

ಭಾರತವು ತನ್ನದೇ ಆದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದೆ ಇದು ಶತಮಾನಗಳಿಂದ ಇಂದಿನವರೆಗೂ ವೈವಿಧ್ಯ ಹಾಗೂ ವೈಶಿಷ್ಟ್ಯಪೂರ್ಣ ವಿಚಾರಗಳ ತವರೂರು ಎಂದೇ ಹೆಸರು ಪಡೆದುಕೊಂಡಿದೆ. ನಾಗರಿಕತೆಯುದ್ದಕ್ಕೂ ಸಂಸ್ಕೃತಿ, ಆಚಾರ, ವಿಚಾರ, ಜೀವನ ಶೈಲಿ, ಧರ್ಮ, ಭಾಷೆ, ಜನಾಂಗ ಇತ್ಯಾದಿಗಳಲ್ಲಿ ಹಾಗೂ ಸ್ತ್ರೀ–ಪುರುಷರ ಬದುಕಿನ ಹೋರಾಟದಲ್ಲಿಯೂ ಕೂಡ ಭಿನ್ನತೆಯನ್ನು ಅವಲೋಕಿಸಿದಾಗ ವರ್ಣ, ಜಾತಿ, ಸಂಪ್ರದಾಯ ಪದ್ಧತಿಗಳು ಏಣಿ–ಶ್ರೇಣಿ ವ್ಯವಸ್ಥೆ ಇಲ್ಲಿ ಕಂಡುಬರುತ್ತದೆ.

ಒಂದೇ ಭಾಷೆಯನ್ನು ಮಾತನಾಡುವ, ಸಾಮಾನ್ಯ ಸಂಸ್ಕೃತಿಯನ್ನು ಹೊಂದಿರುವ, ಪ್ರತ್ಯೇಕ ಭೌಗೋಳಿಕ ಪ್ರದೇಶದಲ್ಲಿ ವಾಸಿಸುವ ಸಮುದಾಯಗಳ ಸಮೂಹವನ್ನು ಬುಡಕಟ್ಟು ಎಂದು ಕರೆಯಲಾಗುತ್ತದೆ. ಬುಡಕಟ್ಟು ಸಮುದಾಯವು ಒಳಬಾಂಧವ್ಯ ಸಮೂಹವನ್ನು ಹೊಂದಿದ ಒಂದು ಗುಂಪು. ಅದು ತನ್ನದೇ ಆದ ಸಾಮಾಜಿಕ ಹಾಗೂ ವೈಚಾರಿಕ ಸಿದ್ಧಾಂತಗಳನ್ನು ಸೃಷ್ಟಿಸುತ್ತದಲ್ಲದೇ ಅದು ತನ್ನ ಪರಿಮಿತಿಯಲ್ಲಿ ಜನಾಂಗೀಯ ಪಂಗಡದಂತ ಒಕ್ಕೂಟವನ್ನು ನಿರ್ಮಿಸುತ್ತದೆ. 2011ರ ಜನಗಣತಿ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯ 8.66% ಬುಡಕಟ್ಟು ಜನರಿದ್ದು 705 ಬುಡಕಟ್ಟು ಸಮುದಾಯಗಳಿವೆ.

ಕೊಡಗಿನ ಆದಿವಾಸಿಗಳಲ್ಲಿ ಎರವರು ಪ್ರಮುಖರು, ಇವರು ಪ್ರಮುಖವಾಗಿ ಕೊಡಗು ಜಿಲ್ಲೆಯ ಪೊನ್ನಂಪೇಟೆ, ವಿರಾಜಪೇಟೆ, ಮೈಸೂರು ಜಿಲ್ಲೆಯ ನಾಗರ ಹೊಳೆ, ಹೆಗ್ಗಡದೇವನಕೋಟೆ ತಾಲೂಕುಗಳಲ್ಲಿ ಕಂಡು ಬರುತ್ತಾರೆ. ಎರವರ ಮುಖ್ಯ ಕಸಬು ಕಾಫಿ ತೋಟಗಳಲ್ಲಿ ಕೂಲಿ ಮಾಡಿ ಜೀವನ ಸಾಗಿಸುವುದು. ಎರವರು ಇಂದು ಕೃಷಿಯನ್ನು ಮಾಡುತ್ತಿದ್ದಾರೆ. ಈ ಲೇಖನದಲ್ಲಿ ಕೊಡಗು ಜಿಲ್ಲೆಯ

***Please cite this article as:*** ಸುಜಾತ ಆರ್ ಮತ್ತು ಆರ್.ಎಚ್. ನಾಯಕ. (2025). ಕೊಡಗು ಜಿಲ್ಲೆಯ ಎರವ ಬುಡಕಟ್ಟು ಸಮುದಾಯದ ಶೈಕ್ಷಣಿಕ ಸ್ಥಿತಿಗತಿಗಳ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(6), 12–21

ಎರವ ಬುಡಕಟ್ಟು ಸಮುದಾಯದ ಶೈಕ್ಷಣಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸಲಾಗಿದೆ. ಅಲ್ಲದೆ ಕೆಲವು ನಿರ್ಧಾರಕಗಳ ಮೂಲಕ ಅವರ ಸರ್ವತೋಮುಖ ಅಭ್ಯುದಯಕ್ಕಾಗಿ ಕೆಲವು ಸಲಹೆಗಳನ್ನು ನೀಡಲಾಗಿದೆ.

**ಅಧ್ಯಯನ ಕ್ಷೇತ್ರ**

ಕರ್ನಾಟಕ ರಾಜ್ಯದಲ್ಲಿ ನೈರುತ್ಯ ಮೂಲೆಯಲ್ಲಿರುವ ಈ ಜಿಲ್ಲೆಯ ಉತ್ತರ ಅಕ್ಷಾಂಶ 110 56' ರಿಂದ 12052' ರ ವರೆಗೆ ಮತ್ತು ಪೂರ್ವ ರೇಖಾಂಶ 75022' ರಿಂದ 76012' ರ ವರೆಗೆ ಇರುವ ಪ್ರದೇಶದಲ್ಲಿ ವಿಸ್ತರಿಸಿದೆ. ದಕ್ಷಿಣೋತ್ತರವಾಗಿ (ಬ್ರಹ್ಮಗಿರಿ ಬೆಟ್ಟದಿಂದ ಹೇಮಾವತಿ ನದಿಯವರೆಗೆ) ಜಿಲ್ಲೆಯ ಗರಿಷ್ಟ ಉದ್ದ 96 ಕಿ ಮೀ ಮತ್ತು ಪೂರ್ವ–ಪಶ್ಚಿಮವಾಗಿ (ಕುಶಾಲ ನಗರದಿಂದ ಸಂಪಾಜೆವರೆಗೆ) ಜಿಲ್ಲೆಯ ಗರಿಷ್ಟ ಅಗಲ 64 ಕಿ.ಮೀ. ಇರುತ್ತದೆ. ಕೊಡಗು ಜಿಲ್ಲೆಯ ಉತ್ತರಕ್ಕೆ ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು, ಪೂರ್ವಕ್ಕೆ ಮೈಸೂರು ಮತ್ತು ಹಾಸನ ಜಿಲ್ಲೆಗಳನ್ನು, ಪಶ್ಚಿಮಕ್ಕೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೇರಳ ರಾಜ್ಯವು ಗಡಿಯಾಗಿದೆ.

ಕೊಡಗು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 4,102 ಚ.ಕಿ.ಮೀ ಆಗಿದ್ದು, ಬೆಂಗಳೂರು ನಗರ ಜಿಲ್ಲೆಯ ನಂತರ ಇದು ರಾಜ್ಯದ ಅತ್ಯಂತ ಚಿಕ್ಕ ಜಿಲ್ಲೆಯಾಗಿದೆ. ಜಿಲ್ಲೆಯ ವಿಸ್ತೀರ್ಣವು ರಾಜ್ಯದ ವಿಸ್ತೀರ್ಣವಾದ 1,91,791 ಚ.ಕಿ.ಮೀ ನಲ್ಲಿ ಶೇ 2.14 ಆಗಿರುತ್ತದೆ. ಈ ಜಿಲ್ಲೆಯ ಆಡಳಿತ ಕಚೇರಿ ಮಡಿಕೇರಿಯಲ್ಲಿದೆ. ಸಮುದ್ರ ಮಟ್ಟದಿಂದ 1,270 ಮೀಟರ್ ಎತ್ತರದಲ್ಲಿರುವ ಈ ಜಿಲ್ಲೆಯಲ್ಲಿ ಸರಾಸರಿ 2725.5 ಮೀಟರ್ ಮಳೆಯಾಗುತ್ತದೆ.

ಕಾಫಿ, ಭತ್ತ, ಕಿತ್ತಳೆ, ಕರಿಮೆಣಸು, ಏಲಕ್ಕಿ ಇಲ್ಲಿನ ಪ್ರಮುಖವಾದ ಬೆಳೆಗಳಾಗಿವೆ. ಕೊಡಗಿನ ಮುಖ್ಯ ನದಿ ಕಾವೇರಿ ಇದು ತಲಕಾವೇರಿಯಲ್ಲಿ ಹುಟ್ಟಿ ಹಲವಾರು ಸ್ಥಳಗಳನ್ನು ದಾಟಿ ಬೇರೆ ಬೇರೆ ಉಪ ನದಿಗಳೊಂದಿಗೆ ಜೊತೆಗೂಡಿ ಕೊನೆಗೆ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ಕೊಡಗು ಜಿಲ್ಲೆಯು ಹೇರಳವಾದ ಅರಣ್ಯ ಸಂಪತ್ತನ್ನು ಹೊಂದಿರುವುದರ ಪರಿಣಾಮವಾಗಿ ಉತ್ತಮವಾದ ವಾತಾವರಣದಿಂದ ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆಯಾಗುತ್ತದೆ. ಈ ಜಿಲ್ಲೆಯ ಭಾಗಮಂಡಲ, ಪುಲಿಂಗೂತ, ಮಾಕೂಟ ಸ್ಥಳಗಳನ್ನು ಅತಿ ಹೆಚ್ಚು ಮಳೆ ಬೀಳುವ ಸ್ಥಳಗಳೆಂದು ಗುರುತಿಸಲಾಗಿದೆ. ಈ ಪ್ರದೇಶದಲ್ಲಿ ವಾರ್ಷಿಕ ಮಳೆಯು 4,000 ಮೀ. ನಿಂದ 8,000 ಮೀ.ಮಿ ಎಂದು ಹೇಳಲಾಗಿದೆ. ಕೊಡಗು ಜಿಲ್ಲೆಯು ಚಿತ್ತಾಕರ್ಷಕವಾದ ಮನಸ್ಸನ್ನು ಸೂರೆಗೊಳ್ಳುವ ಪ್ರಾಣಿವರ್ಗ ಮತ್ತು ಸಸ್ಯವರ್ಗವನ್ನು ಸಹ ಒಳಗೊಂಡಿದೆ.

**ಸಂಶೋಧನಾ ಸಮಸ್ಯೆಯ ಹೇಳಿಕೆ**

ಪ್ರಸ್ತುತ ಅಧ್ಯಯನ ವಿಷಯವು ಪ್ರಮುಖವಾಗಿ "ಕೊಡಗು ಜಿಲ್ಲೆಯ ಎರವ ಬುಡಕಟ್ಟು ಸಮುದಾಯದ ಶೈಕ್ಷಣಿಕ ಸ್ಥಿತಿಗತಿಗಳ ವಿಶ್ಲೇಷಣೆ" ಮಾಡುವುದಾಗಿದೆ.

**ಉದ್ದೇಶಗಳು**

- ಎರವ ಬುಡಕಟ್ಟು ಸಮುದಾಯದ ಹಾಡಿ ಹಾಗೂ ಸತ್ತಮುತ್ತಲ್ಲಿ ಶಿಕ್ಷಣ ಸಂಸ್ಥೆಗಳ ಲಭ್ಯತೆಯ ಪ್ರಮಾಣವನ್ನು ಅಧ್ಯಯನ ಮಾಡುವುದು.
- ಎರವ ಬುಡಕಟ್ಟು ಸಮುದಾಯದ ಕುಟುಂಬದಲ್ಲಿನ ವಿದ್ಯಾಭ್ಯಾಸ ಮಾಡಿದವರು /ಮಾಡುತ್ತಿರುವವರ ಪ್ರಮಾಣವನ್ನು ಅಧ್ಯಯನ ಮಾಡುವುದು.
- ಎರವ ಬುಡಕಟ್ಟು ಸಮುದಾಯದ ಕುಟುಂಬದಲ್ಲಿನ ಮಕ್ಕಳನ್ನು ಶಾಲೆಗೆ ಕಳುಹಿಸುವ ಒಲವಿನ ಪ್ರಮಾಣವನ್ನು ಅಧ್ಯಯನ ಮಾಡುವುದು.
- ಎರವ ಬುಡಕಟ್ಟು ಸಮುದಾಯದ ಕುಟುಂಬದ ಸದಸ್ಯರ ಕುಲಕಸುಬು ಮತ್ತು ವಂಶ ಪರಂಪರೆ ಸಂಪ್ರದಾಯಗಳ ಮುಂದುವರಿಕೆಯಿಂದ

ಶಿಕ್ಷಣವನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆಯೇ ಎಂಬುವುದರ ಕುರಿತು ತಿಳಿಯುವುದು.

- ಎರವ ಬುಡಕಟ್ಟು ಸಮುದಾಯದ ಕುಟುಂಬದಲ್ಲಿನ ವಿಶೇಷಚೇತನ ಮಕ್ಕಳ ಶೈಕ್ಷಣಿಕ ಅವಕಾಶ ಕುರಿತು ತಿಳಿಯುವುದು.
- ಎರವ ಬುಡಕಟ್ಟು ಸಮುದಾಯದ ಕುಟುಂಬದಲ್ಲಿನ ಸದಸ್ಯರು ಉನ್ನತ ಶಿಕ್ಷಣಕ್ಕಾಗಿ ಬೇರೆ ಸ್ಥಳಕ್ಕೆ ಹೋಗುತ್ತಿರುವ ಮಾಹಿತಿಯನ್ನು ತಿಳಿಯುವುದು.

**ಸಂಶೋಧನಾ ವಿನ್ಯಾಸ**

ಪ್ರಸ್ತುತ ಅಧ್ಯಯನವು ಕೊಡಗು ಜಿಲ್ಲೆಯ ಎರವ ಬುಡಕಟ್ಟು ಸಮುದಾಯದ ಶೈಕ್ಷಣಿಕ ಸ್ಥಿತಿಗತಿಗಳ ವಿಶ್ಲೇಷಣೆ ಎಂಬುದಾಗಿದ್ದು, ಅಧ್ಯಯನಕ್ಕಾಗಿ ಸರಳ ಯಾದೃಚ್ಚಿಕ ಮಾದರಿ ವಿಧಾನದ ಮೂಲಕ ಮಾಹಿತಿದಾರರನ್ನು ಆಯ್ಕೆ ಮಾಡಿಕೊಂಡು, ಸಂದರ್ಶನ ಕೈಪಿಡಿ ಮತ್ತು ಪ್ರಶ್ನಾವಳಿಗಳ ಸಹಾಯದಿಂದ ಮಾಹಿತಿದಾರರನ್ನು ವೈಯಕ್ತಿಕವಾಗಿ ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ.

**ಸಂಶೋಧನಾ ವಿಧಾನ ಮತ್ತು ತಂತ್ರಗಳು**

**ಅಧ್ಯಯನ ವಿಧಾನ –** ವಿವರಣಾತ್ಮಕ ಸಮೀಕ್ಷಾ ವಿಧಾನ

**ಸಾಧನಗಳು –** ಕೊಡಗು ಜಿಲ್ಲೆಯ ಎರವ ಬುಡಕಟ್ಟು ಸಮುದಾಯದ ಶೈಕ್ಷಣಿಕ ಸ್ಥಿತಿಗತಿಗಳ ವಿಶ್ಲೇಷಣೆ ಎಂಬ ಅಧ್ಯಯನದಲ್ಲಿ ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

ಪ್ರಾಥಮಿಕ ಮೂಲಗಳು: ಪ್ರಾಥಮಿಕ ಮಾಹಿತಿಗಳನ್ನು ಕೊಡಗು ಜಿಲ್ಲೆಯ ಎರವ ಜನರಿಂದ ಸಂದರ್ಶನ ಕೈಪಿಡಿ ಮತ್ತು ಪ್ರಶ್ನಾವಳಿ ಮೂಲಕ ಸಂಗ್ರಹಿಸಿ ಮಾಹಿತಿ ಪಡೆದು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ವಿರಾಜಪೇಟೆ, ಪೊನ್ನಂಪೇಟೆ, ಕುಶಾಲನಗರ ಮತ್ತು ಸೋಮವಾರಪೇಟೆ ಸುತ್ತಮುತ್ತ ವಾಸಿಸುವ ಎರವ ಕುಟುಂಬಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಆನುಷಂಗಿಕ(ಮಾಧ್ಯಮಿಕ) ಮೂಲಗಳು: ಆನುಷಂಗಿಕ ಮಾಹಿತಿಗಳನ್ನು ನಿಯತಕಾಲಿಕೆಗಳು, ಸಂಶೋಧಕರು ಮಾಡಿದ ಸಂಶೋಧನಾ ಗ್ರಂಥಗಳು, ಪೂರಕ ಪುಸ್ತಕಗಳು, ಹಾಗೂ ಇನ್ನಿತರ ಮೂಲಗಳಿಂದ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

**ಮಾಹಿತಿ ವಿಶ್ಲೇಷಣೆ:**

ಸಂಶೋಧನಾ ವಿಧಾನದ ಎಲ್ಲಾ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಸಂಖ್ಯಾಶಾಸ್ತ್ರೀಯ ಚೌಕಟ್ಟಿನಲ್ಲಿ ವಿಶ್ಲೇಷಿಸುವ ಮೂಲಕ ಶಿಕ್ಷಣಶಾಸ್ತ್ರದ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

**ಕೋಷ್ಟಕ–1:**

**ಎರವ ಬುಡಕಟ್ಟು ಸಮುದಾಯದ ಗ್ರಾಮದಲ್ಲಿ ಶಿಕ್ಷಣ ಸಂಸ್ಥೆಗಳ ಲಭ್ಯತೆ ಕುರಿತ ವಿವರ**

| ಅಭಿಪ್ರಾಯ | | ಸಂಖ್ಯೆ | ಶೇಕಡವಾರು |
|---|---|---|---|
| ನಿಮ್ಮ ಗ್ರಾಮ ಹಾಗೂ ಸುತ್ತಮುತ್ತಲಲ್ಲಿ ಶಿಕ್ಷಣ ಸಂಸ್ಥೆಗಳು ಲಭ್ಯವಿದೆಯೇ? | ಹೌದು | 95 | 63.33% |
| | ಇಲ್ಲ | 55 | 36.67% |
| | ಒಟ್ಟು | 150 | 100.00% |

ನಿಮ್ಮ ಗ್ರಾಮ ಹಾಗೂ ಸುತ್ತಮುತ್ತಲಲ್ಲಿ ಶಿಕ್ಷಣ ಸಂಸ್ಥೆಗಳು ಲಭ್ಯವಿದೆಯೇ? ಪ್ರಶ್ನೆಗೆ ಸಂಬಂಧಿಸಿದಂತೆ ಶೇ 63.33 (95) ರಷ್ಟು ಮಾಹಿತಿದಾರರು ಹೌದು ಎಂದು ಹಾಗೂ 36.67 (55) ರಷ್ಟು ಮಾಹಿತಿದಾರರು ಇಲ್ಲ ಎಂದು ವ್ಯಕ್ತಪಡಿಸಿದ್ದಾರೆ. ಅಂದರೆ ಎರವ ಬುಡಕಟ್ಟು ಸಮುದಾಯ ವಾಸಿಸುವ ಗ್ರಾಮ ಹಾಗೂ ಸುತ್ತಮುತ್ತಲಲ್ಲಿ ಶಿಕ್ಷಣ ಸಂಸ್ಥೆಗಳು ಸೌಲಭ್ಯವಿರುವುದು ಅಧ್ಯಯನದಿಂದ ತಿಳಿದುಬರುತ್ತದೆ. ಇದರಿಂದಾಗಿ ಬುಡಕಟ್ಟು ಸಮುದಾಯದ ಸದಸ್ಯರಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಬೆಳೆಯುವುದಕ್ಕೆ ಪೂರಕವಾಗಿದೆ.

**ಕೋಷ್ಟಕ 2:**

**ಎರವ ಬುಡಕಟ್ಟು ಸಮುದಾಯದ ಕುಟುಂಬದಲ್ಲಿನ ವಿದ್ಯಾಭ್ಯಾಸ ಮಾಡಿದವರು/ ಮಾಡುತ್ತಿರುವವರ ಅಂಕಿಅಂಶಗಳ ವಿವರ**

| ಅಭಿಪ್ರಾಯ | | ವಿವರ | ಕುಟುಂಬಗಳ ಸಂಖ್ಯೆ | ಶೇಕಡವಾರು |
|---|---|---|---|---|
| ನಿಮ್ಮ ಕುಟುಂಬದಲ್ಲಿ ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು ಇದ್ದಾರೆಯೆ ? | | ಹೌದು | 98 | 65.33% |
| | | ಇಲ್ಲ | 52 | 34.67% |
| | | ಒಟ್ಟು | 150 | 100.0% |
| ಹೌದು ಎಂದು ಅಭಿಪ್ರಾಯ ತಿಳಿಸಿದ 98 ಮಾಹಿತಿದಾರರ ಕುಟುಂಬಗಳ ಅಂಕಿಅಂಶ | ಗಂಡು | ಪ್ರಾಥಮಿಕ | 46 | 46.94% |
| | | ಮಾಧ್ಯಮಿಕ | 32 | 32.65% |
| | | ಪಿ.ಯು.ಸಿ | 13 | 13.27% |
| | | ಪದವಿ ಮತ್ತು ನಂತರದ | 7 | 7.14% |
| | | ಒಟ್ಟು | 98 | 100.00% |
| | ಹೆಣ್ಣು | ಪ್ರಾಥಮಿಕ | 61 | 62.24% |
| | | ಮಾಧ್ಯಮಿಕ | 27 | 27.55% |
| | | ಪಿ.ಯು.ಸಿ | 8 | 8.16% |
| | | ಪದವಿ ಮತ್ತು ನಂತರದ | 2 | 2.05% |
| | | ಒಟ್ಟು | 98 | 100.00% |

ನಿಮ್ಮ ಕುಟುಂಬದಲ್ಲಿ ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು ಇದ್ದಾರೆಯೆ ?ಪ್ರಶ್ನೆಗೆ ಸಂಬಂಧಿಸಿದಂತೆ ಶೇ 65.33 (98) ರಷ್ಟು ಮಾಹಿತಿದಾರರು ಹೌದು ಎಂದು ಹಾಗೂ ಕೇವಲ 34.67 (52) ರಷ್ಟು ಮಾಹಿತಿದಾರರು ಇಲ್ಲ ಎಂದು ವ್ಯಕ್ತಪಡಿಸಿದ್ದಾರೆ. ಈ ಅಂಕಿ ಅಂಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಎರವ ಕುಟುಂಬದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವವರು/ಮಾಡಿದವರು ಕಂಡು ಬಂದಿದೆ.

ಮುಂದುವರಿದು ಹೌದು ಎಂದು ಅಭಿಪ್ರಾಯ ತಿಳಿಸಿದ 98 ಮಾಹಿತಿದಾರರ ಕುಟುಂಬದ ಅಂಕಿ ಅಂಶಗಳಿಂದ ವ್ಯಕ್ತವಾಗುವುದೇನೆಂದರೆ, ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು ಗಂಡು ಮಕ್ಕಳಿಗೆ ಸಂಬಂಧಿಸಿದತೆ ಶೇ.46.77 (46) ರಷ್ಟು ಕುಟುಂಬಗಳಲ್ಲಿ ಪ್ರಾಥಮಿಕ ಶಿಕ್ಷಣ ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು, ಶೇ 32.64 (32) ರಷ್ಟು ಕುಟುಂಬಗಳಲ್ಲಿ ಮಾಧ್ಯಮಿಕ ಶಿಕ್ಷಣ ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು, ಶೇ 13.27 (13) ರಷ್ಟು ಕುಟುಂಬಗಳಲ್ಲಿ ಪಿ.ಯು.ಸಿ ಶಿಕ್ಷಣ ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು ಹಾಗೂ ಶೇ 7.14 (7) ರಷ್ಟು ಕುಟುಂಬಗಳಲ್ಲಿ ಪದವಿ ಮತ್ತು ನಂತರದ ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು ಇರುವುದು ಕಂಡುಬಂದಿದೆ. ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು ಹೆಣ್ಣು ಮಕ್ಕಳಿಗೆ ಸಂಬಂಧಿಸಿದಮತೆ ಶೇ 62.24 (61) ರಷ್ಟು ಕುಟುಂಬಗಳಲ್ಲಿ ಪ್ರಾಥಮಿಕ ಶಿಕ್ಷಣ ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು, ಶೇ 27.55 (27) ರಷ್ಟು ಕುಟುಂಬಗಳಲ್ಲಿ ಮಾಧ್ಯಮಿಕ ಶಿಕ್ಷಣ

ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು, ಶೇ 8.16 (8) ರಷ್ಟು ಕುಟುಂಬಗಳಲ್ಲಿ ಪಿ.ಯು.ಸಿ ಶಿಕ್ಷಣ ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು ಹಾಗೂ ಶೇ 2.05 (2) ರಷ್ಟು ಕುಟುಂಬಗಳಲ್ಲಿ ಪದವಿ ಮತ್ತು ನಂತರದ ವಿದ್ಯಾಭ್ಯಾಸ ಮಾಡಿದವರು/ಮಾಡುತ್ತಿರುವವರು ಇರುವುದು ಕಂಡುಬಂದಿದೆ.

**ಕೋಷ್ಟಕ–3:**

**ಎರವ ಬುಡಕಟ್ಟು ಸಮುದಾಯದ ಕುಟುಂಬದಲ್ಲಿನ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಸಂಬಂದಿಸಿದ ಇಚ್ಚೆಯ ವಿವರ**

| ಅಭಿಪ್ರಾಯ | | ಸಂಖ್ಯೆ | ಶೇಕಡವಾರು |
|---|---|---|---|
| ನಿಮ್ಮ ಕುಟುಂಬದ ಎಲ್ಲಾ ಮಕ್ಕಳನ್ನು ಶಾಲೆಗೆ ಕಳಿಸಲು ಇಚ್ಚಿಸುತ್ತೀರಾ? | ಹೌದು | 113 | 75.33% |
| | ಇಲ್ಲ | 37 | 24.67% |
| | ಒಟ್ಟು | 150 | 100.00% |
| ಇಲ್ಲ ಎಂದು ಅಭಿಪ್ರಾಯ ತಿಳಿಸಿದ 37 ಮಾಹಿತಿದಾರರ ಅಭಿಪ್ರಾಯ | | ಸಂಖ್ಯೆ | ಶೇಕಡವಾರು |
| ಆರ್ಥಿಕ ಸಮಸ್ಯೆಗಳು | | 18 | 48.65% |
| ಶಿಕ್ಷಣದಿಂದ ಆಗುವ ಪ್ರಯೋಜನ ಏನು ಎನ್ನುವ ಮನೋಭಾವ | | 4 | 10.81% |
| ಉದ್ಯೋಗ ಸಿಗುವ ನಂಬಿಕೆ ಇಲ್ಲದಿರುವುದು | | 5 | 13.51% |
| ಶೈಕ್ಷಣಿಕ ಜ್ಞಾನದ ಕೊರತೆ | | 3 | 8.11% |
| ಮೂಲಭೂತ ಸೌಕರ್ಯಗಳ ಕೊರತೆ | | 7 | 18.92% |
| ಒಟ್ಟು | | 37 | 100.00% |

ನಿಮ್ಮ ಕುಟುಂಬದ ಎಲ್ಲಾ ಮಕ್ಕಳನ್ನು ಶಾಲೆಗೆ ಕಳಿಸಲು ಇಚ್ಚಿಸುತ್ತೀರಾ? ಪ್ರಶ್ನೆಗೆ ಸಂಬಂಧಿಸಿದಂತೆ ಶೇ 75.33 (113) ರಷ್ಟು ಮಾಹಿತಿದಾರರು ಹೌದು ಎಂದು ಹಾಗೂ ಕೇವಲ 24.67 (37) ರಷ್ಟು ಮಾಹಿತಿದಾರರು ಇಲ್ಲ ಎಂದು ವ್ಯಕ್ತಪಡಿಸಿದ್ದಾರೆ. ಅಂದರೆ ಬಹುತೇಕ ಎರವ ಬುಡಕಟ್ಟು ಕುಟುಂಬದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳ ಶಾಲಾ ಶಿಕ್ಷಣಕ್ಕೆ ಕಳುಹಿಸುವ ಆಸಕ್ತಿ ಮತ್ತು ಇಚ್ಚೆಯಿರುವುದು ಅಧ್ಯಯನದಿಂದ ವ್ಯಕ್ತವಾಗಿದೆ.

ಮುಂದುವರೆದು ಇಲ್ಲ ಎಂದು ಅಭಿಪ್ರಾಯ ತಿಳಿಸಿದ 37 ಮಾಹಿತಿದಾರರ ಅಂಕಿ ಅಂಶಗಳನ್ನು ಗಮನಿಸಿದಾಗ ಶೇ. 48.65 (18) ರಷ್ಟು ಕುಟುಂಬಗಳಲ್ಲಿ ಆರ್ಥಿಕ ಸಮಸ್ಯೆಗಳು, ಶೇ. 10.81 (4) ರಷ್ಟು ಕುಟುಂಬಗಳಲ್ಲಿ ಶಿಕ್ಷಣದಿಂದ ಆಗುವ ಪ್ರಯೋಜನ ಏನು ಎನ್ನುವ ಮನೋಭಾವ, ಶೇ. 13.51 (5) ರಷ್ಟು ಕುಟುಂಬಗಳಲ್ಲಿ ಉದ್ಯೋಗ ಸಿಗುವ ನಂಬಿಕೆಯಿಲ್ಲದಿರುವುದು, ಶೇ. 8.11 (3) ರಷ್ಟು ಕುಟುಂಬಗಳಲ್ಲಿ ಶೈಕ್ಷಣಿಕ ಜ್ಞಾನದ ಕೊರತೆಯಿಂದ ಹಾಗೂ ಶೇ. 18.92 (7) ರಷ್ಟು ಕುಟುಂಬಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಗಳಿಂದಾಗಿ ಮಕ್ಕಳನ್ನು ಶಾಲೆಗೆ ಕಳುಹಿಸದಿರಲು ಕಾರಣಗಳಾಗಿವೆ. ಈ ಹಿನ್ನೆಲೆಯಲ್ಲಿ ತಿಳಿದುಬರುವುದೇನೆಂದರೆ, ಹೆಚ್ಚಿನ ಸಂಖ್ಯೆಯಲ್ಲಿ ಎರವ ಬುಡಕಟ್ಟು ಕುಟುಂಬಗಳಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಲು ಇಚ್ಚೆಯಿರುವುದು ಹಾಗೂ ಕಡಿಮೆ ಕುಟುಂಬಗಳಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಲು ಇಚ್ಚೆಯಿಲ್ಲದಿರುವುದು ಸದರಿ ಅಧ್ಯಯನದಿಂದ ವ್ಯಕ್ತವಾಗಿದೆ.

**ಕೋಷ್ಟಕ–4:**

**ಎರವ ಬುಡಕಟ್ಟು ಸಮುದಾಯದ ಕುಟುಂಬದ ಸದಸ್ಯರು ಕುಲಕಸುಬು ಮತ್ತು ವಂಶ ಪರಂಪರೆ ಸಂಪ್ರದಾಯಗಳ ಮುಂದುವರೆಕೆಯಿಂದ ಶಿಕ್ಷಣವನ್ನು ನಿರ್ಲಕ್ಷಿಸಿದ್ದಾರೆಯೇ ಕುರಿತು ವಿವರ**

| ಅಭಿಪ್ರಾಯ | | ಸಂಖ್ಯೆ | ಶೇಕಡವಾರು |
|---|---|---|---|
| ಕುಟುಂಬದ ಸದಸ್ಯರ ಕುಲಕಸುಬು ಮತ್ತು ವಂಶ ಪರಂಪರೆ ಸಂಪ್ರದಾಯಗಳ ಮುಂದುವರೆಕೆಯಿಂದ ಶಿಕ್ಷಣವನ್ನು ನಿರ್ಲಕ್ಷಿಸಿದ್ದಾರೆಯೇ? | ಹೌದು | 18 | 12.0% |
| | ಇಲ್ಲ | 132 | 88.0% |
| | ಒಟ್ಟು | 150 | 100.0% |
| ಹೌದು ಎಂದು ಅಭಿಪ್ರಾಯ ತಿಳಿಸಿದ 18 ಮಾಹಿತಿದಾರರ ಅಭಿಪ್ರಾಯ | | ಸಂಖ್ಯೆ | ಶೇಕಡವಾರು |
| ಹೆಣ್ಣು ಮಕ್ಕಳು ಶಿಕ್ಷಣಕ್ಕೆ ಕಡಿಮೆ ಆದ್ಯತೆ | | 4 | 22.22% |
| ಬಾಲ್ಯ ವಿವಾಹ | | 0 | 0.00% |
| ಕುಲ ಕಸುಬಿಗೆ ಹೆಚ್ಚಿನ ಪ್ರಾಧಾನ್ಯತೆ | | 0 | 0.00% |
| ಸಂಪ್ರದಾಯಗಳಿಂದ ಹೊರಬರದಿರುವುದು | | 14 | 77.78% |
| ಒಟ್ಟು | | 18 | 100.00% |

ಕುಟುಂಬದ ಸದಸ್ಯರ ಕುಲಕಸುಬು ಮತ್ತು ವಂಶ ಪರಂಪರೆ ಸಂಪ್ರದಾಯಗಳ ಮುಂದುವರೆಕೆಯಿಂದ ಶಿಕ್ಷಣವನ್ನು ನಿರ್ಲಕ್ಷಿಸಿದ್ದಾರೆಯೇ? ಪ್ರಶ್ನೆಗೆ ಸಂಬಂಧಿಸಿದಂತೆ ಶೇ 12.0 (18) ರಷ್ಟು ಮಾಹಿತಿದಾರರು ಹೌದು ಎಂದು ಮತ್ತು ಶೇ 88.00 (132) ರಷ್ಟು ಮಾಹಿತಿದಾರರು ಇಲ್ಲ ಎಂದು ವ್ಯಕ್ತಪಡಿಸಿದ್ದಾರೆ. ಅಂದರೆ ಹೆಚ್ಚಿನ ಎರವ ಬುಡಕಟ್ಟು ಸಮುದಾಯದ ಕುಟುಂಬಗಳಲ್ಲಿ ಕುಲಕಸುಬು ಮತ್ತು ವಂಶ ಪರಂಪರೆ ಸಂಪ್ರದಾಯಗಳ ಹಿನ್ನಲೆಯಲ್ಲಿ ಶಿಕ್ಷಣವನ್ನು ನಿರ್ಲಕ್ಷಿಸದಿರುವುದು ಕಂಡುಬಂದಿದೆ.

ಮುಂದುವರಿದು ಹೌದು ಎಂದು ಅಭಿಪ್ರಾಯ ತಿಳಿಸಿದ 18 ಮಾಹಿತಿದಾರರ ಅಂಕಿ ಅಂಶಗಳಿಂದ ವ್ಯಕ್ತವಾಗುವುದೇನೆಂದರೆ, ಶೇ 22.22 (4) ರಷ್ಟು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಕಡಿಮೆ ಆದ್ಯತೆ ನೀಡಿರುವುದು ಹಾಗೂ ಶೇ 77.78 (14) ರಷ್ಟು ಸಂಪ್ರದಾಯಗಳಿಂದ ಹೊರಬರದಿರುವುದು ಶಿಕ್ಷಣವನ್ನು ನಿರ್ಲಕ್ಷಿಸಿರುವುದಕ್ಕೆ ಕಾರಣಗಳಾಗಿವೆ. ಈ ಅಂಶಗಳಿಂದ ವ್ಯಕ್ತವಾಗುವುದೇನೆಂದರೆ, ಸಂಪ್ರದಾಯಗಳಿಂದ ಹೊರಬರದಿರುವುದು ಪ್ರಧಾನವಾಗಿ ಹೆಚ್ಚಿನ ಸಂಖ್ಯೆಯ ಎರವ ಬುಡಕಟ್ಟು ಕುಟುಂಬಗಳಲ್ಲಿ ಸಂಪ್ರದಾಯಗಳಿಂದ ಹೊರಬರದಿರುವುದು ಶಿಕ್ಷಣದ ಮುಂದುವರೆಕೆಗೆ ಅಡ್ಡಿಯಾಗದಿರುವುದು ಕಂಡುಬಂದಿದೆ ಹಾಗೂ ಉಳಿದಂತೆ ಕಡಿಮೆ ಪ್ರಮಾಣದ ಸಂಖ್ಯೆಯ ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಕಡಿಮೆ ಆದ್ಯತೆ ನೀಡಿರುವುದು ಶಿಕ್ಷಣವನ್ನು ನಿರ್ಲಕ್ಷಿಸಿರುವುದಕ್ಕೆ ಕಾರಣವಾಗಿದೆ.

**ಕೋಷ್ಟಕ–5**

**ಎರವ ಬುಡಕಟ್ಟು ಸಮುದಾಯದ ಕುಟುಂಬದಲ್ಲಿ ವಿಶೇಷಚೇತನ ಮಕ್ಕಳಿದಿದ್ದರೆ ಶಿಕ್ಷಣಕ್ಕೆ ಅವಕಾಶ ನೀಡುಲು ಇಚ್ಛಿಸುವಿರಾ ಮಾಹಿತಿಯ ಕುರಿತ ವಿವರ**

| ಅಭಿಪ್ರಾಯ | | ಸಂಖ್ಯೆ | ಶೇಕಡವಾರು |
|---|---|---|---|
| ನಿಮ್ಮ ಕುಟುಂಬದಲ್ಲಿ ವಿಶೇಷಚೇತನ ಮಕ್ಕಳಿದಿದ್ದರೆ ಶಿಕ್ಷಣಕ್ಕೆ ಅವಕಾಶ ನೀಡುಲು ಇಚ್ಛಿಸುವಿರಾ? | ಹೌದು | 102 | 68.0% |
| | ಇಲ್ಲ | 48 | 32.0% |
| | ಒಟ್ಟು | 150 | 100.0% |
| ಇಲ್ಲ ಎಂದು ಅಭಿಪ್ರಾಯ ತಿಳಿಸಿದ 48 ಮಾಹಿತಿದಾರರ ಅಭಿಪ್ರಾಯ | | ಸಂಖ್ಯೆ | ಶೇಕಡವಾರು |
| ಹಣಕಾಸಿನ ಕೊರತೆ | | 11 | 22.92% |
| ಸೌಕರ್ಯಗಳ ಕೊರತೆ | | 14 | 29.17% |
| ಅರಣ್ಯ ಪ್ರದೇಶ/ವಾಸಸ್ಥಳದಿಂದ ಶಾಲೆ ಮತ್ತು ಕಾಲೇಜು ದೂರವಿರುವುದು. | | 10 | 20.83% |
| ತಾಂತ್ರಿಕವಾಗಿ ಇರುವ ಸೌಲಭ್ಯಗಳ ಅರಿವು ಇಲ್ಲದಿರುವುದು | | 7 | 14.58% |
| ಸಂಪ್ರದಾಯ ಮತ್ತು ಮೂಢನಂಬಿಕೆ | | 6 | 12.50% |
| ಒಟ್ಟು | | 48 | 100.00% |

ನಿಮ್ಮ ಕುಟುಂಬದಲ್ಲಿ ವಿಶೇಷಚೇತನ ಮಕ್ಕಳಿದಿದ್ದರೆ ಶಿಕ್ಷಣಕ್ಕೆ ಅವಕಾಶ ನೀಡುಲು ಇಚ್ಛಿಸುವಿರಾ? ಪ್ರಶ್ನೆಗೆ ಸಂಬಂಧಿಸಿದಂತೆ ಶೇ 68.0 (102) ರಷ್ಟು ಮಾಹಿತಿದಾರರು ಹೌದು ಎಂದು ಹಾಗೂ ಶೇ 32 (48) ರಷ್ಟು ಮಾಹಿತಿದಾರರು ಇಲ್ಲ ಎಂದು ವ್ಯಕ್ತಪಡಿಸಿದ್ದಾರೆ.ಅಂದರೆ ಶೇಕಡಾ ಅರ್ಧಕ್ಕಿಂತ ಹೆಚ್ಚಿನ ಮಾಹಿತಿದಾರರು ವಿಶೇಷಚೇತನ ಮಕ್ಕಳಿದಿದ್ದರೆ ಶಿಕ್ಷಣಕ್ಕೆ ಅವಕಾಶ ನೀಡುಲು ಇಚ್ಛಿಸುವುದು ಹಾಗೂ ಕಡಿಮೆ ಸಂಖ್ಯೆಯಲ್ಲಿ ಇಚ್ಛೆಯಿಲ್ಲದಿರುವುದು ವ್ಯಕ್ತವಾಗಿದೆ.

ಮುಂದುವರೆದು ಇಲ್ಲ ಎಂದು ಅಭಿಪ್ರಾಯ ತಿಳಿಸಿದ 48 ಮಾಹಿತಿದಾರರ ಅಂಕಿ ಅಂಶಗಳ ವಿಶ್ಲೇಷಿಸಿದಾಗ, ಶೇ 22.92 (11) ರಷ್ಟು ಮಾಹಿತಿದಾರಿಗೆ ಹಣಕಾಸಿನ ಕೊರತೆಯಿಂದಾಗಿ, ಶೇ 29.17 (14) ರಷ್ಟು ಮಾಹಿತಿದಾರಿಗೆ ಸೌಕರ್ಯಗಳ ಕೊರತೆಯಿಂದಾಗಿ, ಶೇ 20.83 (10) ರಷ್ಟು ಮಾಹಿತಿದಾರಿಗೆ ಅರಣ್ಯ ಪ್ರದೇಶ/ವಾಸಸ್ಥಳದಿಂದ ಶಾಲೆ ಮತ್ತು ಕಾಲೇಜು ದೂರವಿರುವುದರಿಂದಾಗಿ ಶೇ 14.58 (7) ರಷ್ಟು ಮಾಹಿತಿದಾರಿಗೆ ತಾಂತ್ರಿಕವಾಗಿ ಇರುವ ಸೌಲಭ್ಯಗಳ ಅರಿವು ಇಲ್ಲದಿರುವುದರಿಂದಾಗಿ, ಹಾಗೂ ಶೇ 12.50 (6) ರಷ್ಟು ಮಾಹಿತಿದಾರಿಗೆ ಸಂಪ್ರದಾಯ ಮತ್ತು ಮೂಢನಂಬಿಕೆಗಳಿಂದಾಗಿ ವಿಶೇಷಚೇತನ ಮಕ್ಕಳನ್ನು ಶಾಲೆಗೆ ಕಳುಹಿಸದಿರುವ ಮನೋಭಾವವಿರುವುದು ಕಂಡುಬಂದಿದೆ. ಅಂದರೆ, ಕಡಿಮೆ ಸಂಖ್ಯೆಯ ಎರವ ಬುಡಕಟ್ಟು ಕುಟುಂಬದ ಮಾಹಿತಿದಾರರಿಗೆ ವಿಶೇಷಚೇತನ ಮಕ್ಕಳ ಶಿಕ್ಷಣಕ್ಕೆ ಅವಕಾಶ ನೀಡದಿರುವ ಭಾವನೆಯಿರುವುದು ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

**ಕೋಷ್ಟಕ–6:**

**ಎರವ ಬುಡಕಟ್ಟು ಸಮುದಾಯದ ಕುಟುಂಬದಲ್ಲಿನ ಸದಸ್ಯರು ಉನ್ನತ ಶಿಕ್ಷಣಕ್ಕಾಗಿ ಬೇರೆ ಸ್ಥಳಕ್ಕೆ ಹೋಗುತ್ತಿರುವ ಕುರಿತ ವಿವರ**

| ಅಭಿಪ್ರಾಯ | | ಸಂಖ್ಯೆ | ಶೇಕಡವಾರು |
|---|---|---|---|
| ನಿಮ್ಮ ಕುಟುಂಬದಲ್ಲಿನ ಸದಸ್ಯರು ಉನ್ನತ ಶಿಕ್ಷಣಕ್ಕಾಗಿ ಬೇರೆ ಸ್ಥಳಕ್ಕೆ ಹೋಗುತ್ತಿದ್ದಾರೆಯೇ? | ಹೌದು | 42 | 28% |
| | ಇಲ್ಲ | 108 | 72% |
| | ಒಟ್ಟು | 150 | 100.00% |

ನಿಮ್ಮ ಕುಟುಂಬದಲ್ಲಿನ ಸದಸ್ಯರು ಉನ್ನತ ಶಿಕ್ಷಣಕ್ಕಾಗಿ ಬೇರೆ ಸ್ಥಳಕ್ಕೆ ಹೋಗುತ್ತಿದ್ದಾರೆಯೇ? ಪ್ರಶ್ನೆಗೆ ಸಂಬಂಧಿಸಿದಂತೆ ಶೇ 28 (42) ರಷ್ಟು ಮಾಹಿತಿದಾರರು ಹೌದು ಎಂದು ಹಾಗೂ ಶೇ 72 (108) ರಷ್ಟು ಮಾಹಿತಿದಾರರು ಇಲ್ಲ ಎಂದು ವ್ಯಕ್ತಪಡಿಸಿದ್ದಾರೆ.ಅಂದರೆ ಎರವ ಬುಡಕಟ್ಟು ಕುಟುಂಬದ ಸದಸ್ಯರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೇರೆ ಸ್ಥಳಕ್ಕೆ ಹೋಗದಿರುವುದು ಕಂಡುಬಂದಿದೆ. ಮುಂದುವರೆದು ಉನ್ನತ ಶಿಕ್ಷಣದ ಬಗ್ಗೆ ಕಡಿಮೆ ಅರಿವು, ಉನ್ನತ ಶಿಕ್ಷಣದ ಬಗ್ಗೆ ಮಾಹಿತಿ ಇಲ್ಲದಿರುವುದು ಹಾಗೂ ಹೆಚ್ಚಾಗಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣಕ್ಕೆ ಮಾತ್ರ ಒತ್ತು ನೀಡುತ್ತಿರುವುದರಿಂದಾಗಿ ಒಲವಿರುವುದರಂದಾಗಿ ಕುಟುಂಬದಲ್ಲಿನ ಸದಸ್ಯರನ್ನು ಉನ್ನತ ಶಿಕ್ಷಣಕ್ಕಾಗಿ ಬೇರೆ ಸ್ಥಳಕ್ಕೆ ಹೋಗದಿರುವುದು ಅಧ್ಯಾಯನದಿಂದ ಕಂಡುಬಂದಿದೆ.

**ನಿರ್ಣಯಗಳು**

ಎರವ ಬುಡಕಟ್ಟು ಸಮುದಾಯದ ಕೌಟುಂಬಿಕ ಶೈಕ್ಷಣಿಕ ಸ್ಥಿತಿಗತಿಯ ಅಂಕಿಅಂಶಗಳ ವಿಶ್ಲೇಷಣೆಯಿಂದ ತಿಳಿದುಬರುವುದೇನೆಂದರೆ, ಎರವ ಬುಡಕಟ್ಟು ಸಮುದಾಯ ವಾಸಿಸುವ ಹಾಡಿ/ಕಾಲೋನಿಗಳು ಹಾಗೂ ಸುತ್ತಮುತ್ತಲಲ್ಲಿ ಶಿಕ್ಷಣ ಸಂಸ್ಥೆಗಳು ಲಭ್ಯತೆಯಿರುವುದು ಕಂಡುಬಂದಿದೆ. ಇದರಿಂದಾಗಿ ಶಿಕ್ಷಣದ ಬಗ್ಗೆ ಆಸಕ್ತಿ ಬೆಳೆಯಲು ಹಾಗೂ ಶಿಕ್ಷಣದ ಅವಕಾಶಗಳನ್ನು ಉತ್ತಮ ಪಡಿಸಿಕೊಳ್ಳಲು ಸಹಕಾರಿಯಾಗಿದೆ. ವಿದ್ಯಾಭ್ಯಾಸ ಮಾಡಿದವರು / ಮಾಡುತ್ತಿರುವವರ ಅಂಕಿಅಂಶಗಳ ವಿಶ್ಲೇಷಣೆಗೆ ಸಂಬಂಧಿಸಿದಂತೆ, ಎರವ ಬುಡಕಟ್ಟು ಸಮುದಾಯದಲ್ಲಿ ಶಿಕ್ಷಣ ಬಗ್ಗೆ ಆಸಕ್ತಿ ಮತ್ತು ಕಳಕಳಿ ಇರುವುದು ಪ್ರಗತಿದಾಯಕ ವಿಚಾರವಾಗಿದೆ. ಮಕ್ಕಳನ್ನು ಶಾಲೆಗೆ ಕಳಿಸುವ ಇಚ್ಛೆಗೆ ಸಂಬಂಧಿಸಿದಂತೆ, ಹೆಚ್ಚಿನ ಸಂಖ್ಯೆಯಲ್ಲಿ ಎರವ ಬುಡಕಟ್ಟು ಕುಟುಂಬಗಳಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಇಚ್ಛೆಯಿರುವುದು ಹಾಗೂ ಕಡಿಮೆ ಸಂಖ್ಯೆಯ ಕುಟುಂಬಗಳಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಲು ಆರ್ಥಿಕ ಸಮಸ್ಯೆಗಳಿಂದಾಗಿ, ಉದ್ಯೋಗ ಸಿಗುವ ನಂಬಿಕೆ ಇಲ್ಲದಿರುವುದರಿಂದಾಗಿ ಹಾಗೂ ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಶಾಲೆಗೆ ಕಳುಹಿಸುವುದಕ್ಕೆ ಇಚ್ಛೆಯಿಲ್ಲದಿರುವುದು ಕಂಡುಬಂದಿದೆ. ಕುಲಕಸುಬು ಮತ್ತು ವಂಶ ಪರಂಪರೆ ಸಂಪ್ರದಾಯಗಳ ಮುಂದುವರೆಕೆಯಿಂದ ಶಿಕ್ಷಣವನ್ನು ನಿರ್ಲಕ್ಷ್ಯಗೆ ಸಂಬಂಧಿಸಿದಂತೆ, ಅತಿ ಕಡಿಮೆ ಸಂಖ್ಯೆಯ ಕುಟುಂಬಗಳಲ್ಲಿ, ಹೆಣ್ಣು ಮಕ್ಕಳು ಶಿಕ್ಷಣಕ್ಕೆ ಕಡಿಮೆ ಆದ್ಯತೆ ನೀಡಿರುವುದು ಹಾಗೂ ಸಂಪ್ರದಾಯಗಳಿಂದ ಹೊರಬರದಿರುವುದರಿಂದಾಗಿ ಶಿಕ್ಷಣವನ್ನು ನಿರ್ಲಕ್ಷಿಸಿರುವುದು ಕಂಡುಬಂದಿದೆ. ವಿಶೇಷಚೇತನ ಮಕ್ಕಳ ಶೈಕ್ಷಣಿಕ್ಕೆ ಅವಕಾಶ ನೀಡುಲು ಇಚ್ಛಿಸುವಿರಾ ಕುರಿತಂತೆ ಶೇಕಡಾ ಐವತ್ತಕ್ಕೂ ಹೆಚ್ಚಿನ ಕುಟುಂಬಗಳಲ್ಲಿ ವಿಶೇಷಚೇತನ ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುವ ಇಚ್ಛೆಯಿರುವುದು ಹಾಗೂ

ಉಳಿದಂತೆ, ಹಣಕಾಸಿನ ಕೊರತೆ, ಅರಣ್ಯ ಪ್ರದೇಶ/ವಾಸಸ್ಥಳದಿಂದ ಶಾಲೆ ಮತ್ತು ಕಾಲೇಜು ದೂರವಿರುವುದರಿಂದ, ಮಾಹಿತಿದಾರಿಗೆ ಸೌಕರ್ಯಗಳ ಕೊರತೆಯಿಂದಾಗಿ, ಇರುವ ಸೌಲಭ್ಯಗಳ ಅರಿವು ಇಲ್ಲದಿರುವುದರಿಂದಾಗಿ ಹಾಗೂ ಸಂಪ್ರದಾಯ ಮತ್ತು ಮೂಢನಂಬಿಕೆಗಳಿಂದಾಗಿ ಎರವ ಬುಡಕಟ್ಟು ಕುಟುಂಬಗಳಲ್ಲಿ ವಿಶೇಷಚೇತನ ಮಕ್ಕಳನ್ನು ಶಾಲೆಗೆ ಕಳುಹಿಸುವ ಇಚ್ಛೆಯಿಲ್ಲದಿರುವುದು ಕಂಡುಬಂದಿದೆ. ಉನ್ನತ ಶಿಕ್ಷಣಕ್ಕಾಗಿ ಬೇರೆ ಸ್ಥಳಕ್ಕೆ ಹೋಗುತ್ತಿರುವ ಕುರಿತಂತೆ, ಎರವ ಬುಡಕಟ್ಟು ಕುಟುಂಬದ ಸದಸ್ಯರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೇರೆ ಸ್ಥಳಕ್ಕೆ ಹೋಗದಿರುವುದು ಕಂಡುಬಂದಿದೆ. ಇದಕ್ಕೆ ಉನ್ನತ ಶಿಕ್ಷಣದ ಬಗ್ಗೆ ಮಾಹಿತಿ ಇಲ್ಲದಿರುವುದು ಹಾಗೂ ಹೆಚ್ಚಾಗಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣಕ್ಕೆ ಮಾತ್ರ ಒತ್ತು ನೀಡುತ್ತಿರುವುದು ಅಧ್ಯಯನದಿಂದ ವ್ಯಕ್ತವಾಗಿದೆ.

**ಸಲಹೆಗಳು**

ಶಿಕ್ಷಣ ಮತ್ತು ಉನ್ನತ ಶಿಕ್ಷಣ ಈ ಜನಾಂಗಕ್ಕೆ ದೊರಕಿದಾಗ ಸಾಮಾಜಿಕ, ರಾಜಕಿಯ, ಆರ್ಥಿಕ ಹಾಗೂ ಇನ್ನಿತರ ಸಬಲೀಕರಣ ಸಾಧ್ಯವಾಗುತ್ತದೆ. ಈ ಜನಾಂಗದ ಮಕ್ಕಳನ್ನು ಶಿಕ್ಷಣದ ಮುಖ್ಯವಾಹಿನಿಗೆ ತರಲು ಕೆಲವು ಸಲಹೆಗಳನ್ನು ನೀಡಲಾಗಿದೆ.

- ಕಡ್ಡಾಯವಾಗಿ ವಸತಿ ನಿಲಯದಲ್ಲಿ ಮಕ್ಕಳಿಗೆ ಅವಕಾಶ ಒದಗಿಸಬೇಕು.
- ಅನಿವಾರ್ಯವಾಗಿ ಮಕ್ಕಳೊಂದಿಗೆ ವಲಸೆ ಹೋಗುವ ಕುಟುಂಬದ ಮಕ್ಕಳಿಗೆ ವಲಸೆ ಹೋದ ಸ್ಥಳದಲ್ಲಿ ಶಿಕ್ಷಣ ದೊರೆಯುವಂತೆ ಮಾಡಬೇಕು.
- ಉಪಲಬ್ದ ಶಿಷ್ಯವೇತನ ಹಾಗೂ ಇನ್ನಿತರ ಸೇವಾ ಸೌಲಭ್ಯಗಳ ಕುರಿತು ಜಾಗೃತಿಯನ್ನು ಮೂಡಿಸುವುದು.
- ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ ಅವರನ್ನು ಶಿಕ್ಷಣದ ಮುಖ್ಯವಾಹಿನಿಗೆ ತರುವುದು.
- ಸಮಾಜ ಕಾರ್ಯಕರ್ತರು ಈ ಸಮುದಾಯದವರ ಸಕಾರಾತ್ಮಕ ಏಳಿಗೆಗಾಗಿ ಅವಶ್ಯಕ ಮಧ್ಯಸ್ಥಿಕೆಯನ್ನು ವಹಿಸುವುದು.
- ಬುಡಕಟ್ಟು ವಯಸ್ಕರ ಶಿಕ್ಷಣ ಕೇಂದ್ರವನ್ನು ಎರವರು ವಾಸಿಸುವ ಪ್ರದೇಶದಲ್ಲಿ ಸ್ಥಾಪಿಸುವುದು.
- ಆದಿವಾಸಿ ಮಕ್ಕಳ ಶಿಕ್ಷಣಕ್ಕಾಗಿ ಬುಡಕಟ್ಟು ಹಾಡಿಗಳಲ್ಲಿ ಸರ್ಕಾರ ಪ್ರತ್ಯೇಕ ಶಾಲೆಗಳನ್ನು, ವಿದ್ಯಾರ್ಥಿ ನಿಲಯಗಳನ್ನು ನಡೆಸುತ್ತಿದೆ. ಆದರೆ ಅವು ಕೇವಲ ಪ್ರಾಥಮಿಕ ಶಾಲಾ ಹಂತದವರೆಗೆ ಮಾತ್ರ ಇರದೆ ಈ ಸೌಲಭ್ಯವನ್ನು ಪ್ರೌಢಶಾಲಾ ಹಂತದವರೆಗೆ ವಿಸ್ತರಿಸುವುದು ವಿಶೇಷವಾಗಿ ಹೆಣ್ಣುಮಕ್ಕಳಿಗೆ ಅನುಕೂಲ ಮಾಡಿಕೊಡುವುದು.
- ಶೈಕ್ಷಣಿಕವಾಗಿ ಹಿಂದುಳಿದಿರುವ ಇವರಿಗೆ ಉತ್ತಮ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸುವಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಇವರ ಮಕ್ಕಳಿಗೆ ಶಿಕ್ಷಣವನ್ನು ಪಡೆಯಲು ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ಕ್ರಮವನ್ನು ಸರ್ಕಾರ ಸಂಬಂಧಪಟ್ಟ ಇಲಾಖೆ ಹಾಗೂ ಸಂಘ ಸಂಸ್ಥೆಗಳು ಕೈಗೊಳ್ಳಬೇಕಾಗಿದೆ.
- ಪ್ರೌಢ ಶಿಕ್ಷಣದ ನಂತರ ಉನ್ನತ ಶಿಕ್ಷಣಕ್ಕಾಗಿ ಮೂಲನಿವಾಸಿ ಬುಡಕಟ್ಟು ಮಕ್ಕಳಿಗೆ ವಿಶೇಷ ಮೀಸಲಾತಿ ಒದಗಿಸಿ ಸಮುದಾಯದ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಸೂಕ್ತವಾದ ಅವಕಾಶವನ್ನು ದೊರಕಿಸುವುದು.

**ಪರಾಮರ್ಶನ ಗ್ರಂಥಗಳು**


- ಬೋರಲಿಂಗಯ್ಯ, ಹಿ.ಚಿ. (2015). ಬುಡಕಟ್ಟು ದೈವಾರಾಧನೆ (ಬುಡಕಟ್ಟು ಅಧ್ಯಯನ ಮಾಲೆ–1), ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.

- ಹರೀಶ್, ಪಿ.ಎನ್. (2011). ಎರವರ ಸಂಸ್ಕೃತಿ (ಉಪಸಂಸ್ಕೃತ ಅಧ್ಯಯನ ಮಾಲೆ) ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಮಂಜುಳಾ ಕೆ ಪಿ ಮತ್ತು ಕೃಪಾರಿನಿ (2018). ಬುಡಕಟ್ಟಿನ ಜನರು ಶಿಕ್ಷಣ ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಶಿಕ್ಷಣ ಸೌಧ, ತ್ರೈಮಾಸಿಕ ಮತ್ತು ಸಂಶೋಧನ ಪತ್ರಿಕೆ, 7(4), 35–36.
- ಮಂಜುನಾಥ, ಬಿ.ಆರ್. (2014). ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಮಾನವಶಾಸ್ತ್ರೀಯ ಅಧ್ಯಯನ. (ಪಿಎಚ್.ಡಿ, ಮಹಾಪ್ರಬಂಧ). ಮೈಸೂರು ವಿಶ್ವವಿದ್ಯಾನಿಲಯ.
- ಪ್ರಭಾಕರ, ಎ. ಎಸ್. (2019). ಬುಡಕಟ್ಟು ಅಧ್ಯಯನ, ಸಂಪುಟ–1, ಸಂಚಿಕೆ–1, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
- ರಾಜೇಶ ಕುಮಾರ ಎಂ (2019). ಗುಂಡ್ಲುಪೇಟೆ ಪರಿಸರದ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಚರಿತ್ರೆ– ಸೋಲಿಗ ಹಾಗೂ ಜೇನು ಕುರುಬ. (ಪಿಎಚ್.ಡಿ, ಮಹಾಪ್ರಬಂಧ). ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಯಶವಂತಕುಮಾರ, ಚಾ. ನಾ. (2017). ಬುಡಕಟ್ಟು ವೃತ್ತಿ ಮತ್ತು ಪಾರಂಪರಿಕ ಜ್ಞಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ.